# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1469 |
| ಮಾನ್ಯ ಸದಸ್ಯರ ಹೆಸರು | : | ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶಿತರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17-03-2026 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಸರ್ಕಾರದ ಹಣದಿಂದ ನಿರ್ಮಿಸಿದ ಎಷ್ಟು ಶೌಚಾಲಯಗಳಿವೆ; ಕೋಟಿಗಟ್ಟಲೆ ಹಣ ವೆಚ್ಚ ಮಾಡಿ ನಗರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನಿರ್ಲಕ್ಷತನದಿಂದ ಶೌಚಾಲಯಗಳು ಬಳಕೆಯಾಗದೆ ಬೀಗ ಹಾಕಿರುವುದು ನಿಜವೇ; | • ಶಹಾಬಾದ ನಗರಸಭೆಗೆ ಸ್ವಚ್ಛ ಭಾರತ್ ಮಿಷನ್(ನಗರ)-2.0 ಅಡಿಯಲ್ಲಿ,<br>1. 16 ಸೀಟ್ ಸಾರ್ವಜನಿಕ ಶೌಚಾಲಯ,<br>2. 8 ಸೀಟ್ ಸಮುದಾಯ ಶೌಚಾಲಯ,<br>3. 12 ಸೀಟ್ ಮಹತ್ವಾಕಾಂಕ್ಷಿ ಶೌಚಾಲಯ ಮತ್ತು<br>4. 12 ಸಂಖ್ಯೆಯ ಮೂತ್ರಾಲಯಗಳನ್ನು ನಿರ್ಮಿಸಲಾಗಿರುತ್ತದೆ.<br>• ಶಹಾಬಾದ ನಗರಸಭೆ ವ್ಯಾಪ್ತಿಯಲ್ಲಿನ ಶೌಚಾಲಯಗಳ ನಿರ್ವಹಣೆಗೆ ಏಜೆನ್ಸಿದಾರರಾದ ಮೆ\|\| ಜೀವನ ಜಾಗರಣ (ರಿ), ಕಲಬುರಗಿ ರವರಿಗೆ ವಾರ್ಷಿಕ ನಿರ್ವಹಣೆಗೆ ದಿನಾಂಕ: 01-08-2025 ರಂದು ಕಾರ್ಯಾದೇಶ ನೀಡಲಾಗಿದ್ದು, ಎಲ್ಲಾ ಶೌಚಾಲಯಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಿರುತ್ತದೆ. |
| ಆ) | ಶಹಾಬಾದ ಪಟ್ಟಣದ ನಗರಸಭೆ ಸರ್ಕಾರದ ಹಣದಿಂದ ನಿರ್ಮಿಸಿದ ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದರಿಂದ ಜನರು ಬಯಲು ಶೌಚಾಲಯಕ್ಕೆ ಹೋಗುತ್ತಿರುವುದು ನಿಜವೆ; | • ಶಹಾಬಾದ ನಗರಸಭೆಯಲ್ಲಿ ಶೌಚಾಲಯಗಳ ಕಾರ್ಯ ನಿರ್ವಹಣೆಗೆ ಏಜೆನ್ಸಿದಾರರಾದ ಮೆ\|\| ಜೀವನ ಜಾಗರಣ (ರಿ) ಕಲಬುರಗಿ ರವರು ಸದರಿ ಶೌಚಾಲಯ ನಿರ್ವಹಣೆ ಮಾಡುತ್ತಿದ್ದು, ಸದರಿ ಶೌಚಾಲಯಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಿರುತ್ತದೆ. |
| ಇ) | ಸರ್ಕಾರದ ಹಣದಿಂದ ನಿರ್ಮಾಣವಾದ ಶೌಚಾಲಯಗಳನ್ನು ಸಾರ್ವಜನಿಕರು ಬಳಸಲು ಬೇಕಾದ ನಿರ್ವಹಣೆ ಮತ್ತು ಜಾಗೃತಿ ಮೂಡಿಸಲು ಕೈಗೊಳ್ಳಬಹುದಾದ ಕ್ರಮಗಳೇನು; | • ಸ್ವಚ್ಛ ಭಾರತ ಮಿಷನ್ (ನಗರ) ಅಭಿಯಾನದಡಿ ನಗರಸಭೆ ವ್ಯಾಪ್ತಿಯಲ್ಲಿ ಸ್ವಚ್ಛತಾ ಮನೋಭಾವ ಬೆಳಸುವ ಸಲುವಾಗಿ "ನಮ್ಮ ನಡೆ ಸ್ವಚ್ಛತೆ ಕಡೆಗೆ" ಎಂಬ ಕಾರ್ಯಕ್ರಮದಡಿ ಜಾಥಾ ಕಾರ್ಯಕ್ರಮ, ಬೀದಿ ನಾಟಕ ಹಾಗೂ ಘನ ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಪ್ರತಿದಿನ ಸಾರ್ವಜನಿಕರಿಗೆ ಶೌಚಾಲಯ ಬಳಕೆಯ ಕುರಿತು ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಸ್ವಚ್ಛ ಭಾರತ ಅಭಿಯಾನ ನಡೆಯುತ್ತಿರುವ ಸಂದರ್ಭದಲ್ಲಿ ಇನ್ನು ಬಯಲು ಶೌಚಾಲಯಕ್ಕೆ ಅವಕಾಶ ಮಾಡುತ್ತಿರುವುದರಿಂದ ಪಟ್ಟಣದ ಸ್ವಚ್ಛತೆ ಮತ್ತು ಜನರ ಆರೋಗ್ಯಕ್ಕೆ ಧಕ್ಕೆಯಾಗುವುದಿಲ್ಲವೆ; | • ಶಹಾಬಾದ ನಗರಸಭೆ ವ್ಯಾಪ್ತಿಯಲ್ಲಿನ ಸಾರ್ವಜನಿಕ ಹಾಗೂ ಸಮುದಾಯ ಶೌಚಾಲಯಗಳ ನಿರ್ವಹಣೆ ಮಾಡಲು, ಏಜೆನ್ಸಿದಾರರಾದ ಮೆ\|\| ಜೀವನ ಜಾಗರಣ (ರಿ) ಕಲಬುರಗಿ ರವರಿಗೆ ವಹಿಸಿರುವುದರಿಂದ ಸಾರ್ವಜನಿಕರು ಈ ಶೌಚಾಲಯಗಳನ್ನು ಬಳಕೆ ಮಾಡುತ್ತಿದ್ದಾರೆ.<br>• ಸಾರ್ವಜನಿಕರಿಗೆ ಈ ಕುರಿತು ಜಾಗೃತಿ ಮೂಡಿಸಲಾಗುತ್ತಿದ್ದು, ಪ್ರಸ್ತುತ ಶಹಾಬಾದ ನಗರಸಭೆ ವ್ಯಾಪ್ತಿಯಲ್ಲಿ ಬಯಲು ಶೌಚಾಲಯಕ್ಕೆ ಅವಕಾಶ ನೀಡಿರುವುದಿಲ್ಲ. |
| ಉ) | ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡದೆ ಸರ್ಕಾರದ ಹಣ ದುಂದು ವೆಚ್ಚವಾಗಿರುವುದಕ್ಕೆ ಶಹಾಬಾದ ಪಟ್ಟಣದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ | • ಶಹಾಬಾದ ನಗರಸಭೆ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಶೌಚಾಲಯಗಳ ನಿರ್ವಹಣೆಯನ್ನು ಏಜೆನ್ಸಿದಾರರಾದ ಮೆ\|\| ಜೀವನ ಜಾಗರಣ (ರಿ), ಕಲಬುರಗಿ ರವರಿಗೆ ವಾರ್ಷಿಕ ನಿರ್ವಹಣೆಗೆ ದಿನಾಂಕ: 01-08-2025 ರಂದು ಕಾರ್ಯಾದೇಶ ನೀಡಲಾಗಿದ್ದು, ಶೌಚಾಲಯಗಳ |

| | | |
|---|---|---|
| | ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ? | ನಿರ್ವಹಣೆಯನ್ನು ಸದರಿ ಏಜೆನ್ಸಿಯವರು ಸಮರ್ಪಕವಾಗಿ ನಿರ್ವಹಿಸುತ್ತಿರುವುದನ್ನು ನಿಯಮಿತವಾಗಿ ಮೇಲ್ವಿಚಾರಣೆ ನಡೆಸಿ ಖಾತರಿಪಡಿಸಿಕೊಳ್ಳಲಾಗುತ್ತಿದೆ. |

(ಕಡತ ಸಂಖ್ಯೆ: ನಅಇ 75 ಸಿಎಸ್ಎಸ್ 2026)

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು